ನಾಟಕ ಅಂತೀರಿ ಇಷ್ಟು ದಿನ ಕತ್ತೆ ಕಾಯ್ತಾ ಇದ್ರ ಅಂತ ರೈಟರು ಸೀನನ ಮುಖ ನೋಡದೆ ಹೇಳಿದ. ಆಮೇಲೆ, 'ನೋಡ್ರಿ, ಶ್ರೀನಿವಾಸ್ ಈಗ ರೂಲ್ಸ್‌ಗಳು ಬದಲಾಗಿವೆ. ನಾಟಕವನ್ನು ಮೊದಲು ನಾನು ಓದಬೇಕು. ಅದರಲ್ಲಿ ಆಕ್ಷೇಪಾರ್ಹವಾದ ವಿಚಾರಗಳಿಲ್ಲ ಅಂತ ಟಿಪ್ಪಣಿ ಬರೆದು ಮುಂದಿನ ಕ್ರಮಕ್ಕೆ ಅಂತ ಅರ್ಜಿಯನ್ನು ಸಾಹೇಬರಿಗೆ ಕಳಿಸಬೇಕು. ಅವರು ನೋಡಿ ಪರ್ಮಿಷನ್ ಕೊಡಬೇಕೆ ಬೇಡವೇ ಅನ್ನೋದು ಡಿಸೈಡ್ ಮಾಡ್ತಾರೆ. ಇದು ಪ್ರೊಸಿಜರು. ಇವತ್ತು ಪರ್ಮೀಷನ್ ಲೆಟರ್ ಸಿಗೋದು ಕಷ್ಟ...' ಅಂತ ನಿರ್ಭಾವುಕವಾಗಿ ಹೇಳಿದ.

'ಸಾರ್, ಹದಿನೈದು ವರ್ಷಗಳಾದ ಮೇಲೆ ಶನಿಮಹಾತ್ಮೆ ಆಡ್ತ ಇದೀವಿ. ನಾಟಕ ನಿಂತರೆ ಊರಿಗೆ ಕೆಟ್ಟದಾಗುತ್ತೆ. ನೀವು ಮನಸ್ಸು ಮಾಡಿದರೆ ಆಗುತ್ತೆ' ಅಂತ ಗೋಗರೆದ. 'ಸಾಹೇಬರಿಗೆ ಫೋನ್ ಮಾಡಿ ನೀವು ಬಂದಿರೋ ವಿಷಯ ಹೇಳ್ತೀನಿ, ಆರು ಗಂಟೆ ಮೇಲೆ ಬನ್ನಿ' ರೈಟರು ಹೇಳಿದ. ಅಷ್ಟರಲ್ಲಿ ಬಾಬಣ್ಣನಿಂದ ಫೋನ್ ಬಂತು.

'ಸಿಐ ಸಾಹೇಬರ ಜತೆ ನಾನು ಮಾತಾಡ್ತೀನಿ. ಎಂಟು ಗಂಟೆ ಹೊತ್ತಿಗೆ ಪರ್ಮಿಷನ್ ಲೆಟರ್ ಕೊಟ್ಟರೂ ಸಾಕು. ನೀನು ಅದನ್ನು ತಗಂಡೇ ಬರಬೇಕು. ಇಲ್ಲಿ ಒಂದು ಜನರೇಟರ್ ಇದೆ. ಏನೂ ತೊಂದರೆ ಆಗಲ್ಲ' ಅಂತ ಬಾಬಣ್ಣ ಹೇಳಿದ ಮೇಲೆ ಸೀನ ನಿರಾಳನಾದ. ಸಿಐ ಸಾಹೇಬರು ಸ್ಟೇಷನ್ನಿಗೆ ಬಂದಾಗ ಒಂಬತ್ತು ಗಂಟೆಯಾಗಿತ್ತು. ಮರುಕ್ಷಣವೇ ಸೀನನನ್ನು ಕರೆದರು. 'ಎಲ್ರಿ ಸ್ಕ್ರಿಪ್ಟು? ನಾಟಕದಲ್ಲಿ ದೇಶದ ನಾಯಕರನ್ನು ಟೀಕಿಸುವ ಸಂಭಾಷಣೆಗಳಿರಬಹುದು. ಸ್ಕ್ರಿಪ್ಟ್ ನೋಡದೆ ಪರ್ಮಿಷನ್ ಕೊಡಲ್ಲ' ಅಂದರು.

ಸಾರ್, ಜಿಲ್ಲಾ ಪಂಚಾಯ್ತಿ ಮಾಜಿ ಮೆಂಬರು ಬಾಬಣ್ಣ ಕಳಿಸಿದರು ಅಂದ. ಮೂರು ತಿಂಗಳ ಹಿಂದೆ ಎಂಎಲ್ಲೆ ಸಾಹೇಬರು ಹೇಳಿದರು ಅಂತ ಒಂದು ಬಯಲಾಟಕ್ಕೆ ಪರ್ಮಿಷನ್ ಕೊಟ್ಟಿದ್ದೆ. ಅದರಲ್ಲಿ ಸೂತ್ರಧಾರ, ನಮ್ಮ ಭೂಪಾಲರು, ಸೇನಾಧಿಪತಿ ಅಮಿತಸೇನನ ಜತೆಗೂಡಿ ಏಳು ಅಕ್ಷೋಹಿಣಿ ಸೈನ್ಯ ಸಮೇತ ಪೂರ್ವ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಮಣ್ಣು ಮುಕ್ಕಿ, ಮುಖ ಮುಚ್ಚಿಕೊಂಡು ರಾತ್ರೋರಾತ್ರಿ ರಾಜಧಾನಿಗೆ ಬಂದರಲ್ಲ ಹಂಗೇ ನಮ್ಮ ಮಹಾರಾಜರೂ... ' ಅಂತ ಬಯಲಾಟದಲ್ಲಿ ಇಲ್ಲದ ಮಾತುಗಳನ್ನು ಆಡಿದ್ದನಂತೆ! ಒನ್ಸ್‌ಮೋರ್ ಕೂಗಿದರು ಅಂತ ಮೂರ್ನಾಲ್ಕು ಸಲ ಅವೇ ಮಾತುಗಳನ್ನು ಹೇಳಿದ್ದ.

'ಸೂತ್ರಧಾರ ನಮ್ಮ ಪಕ್ಷದ ಲೀಡರುಗಳನ್ನು ಟೀಕೆ ಮಾಡಿದ ಅಂತ ಯಾರೋ ಡಿಸಿ, ಎಸ್‌ಪಿ ಸಾಹೇಬರಿಗೆ ಮೂಕರ್ಜಿ ಬರೆದರು. ಡೀಸಿ ಮೇಡಂ ನನ್ನ ಕರೆಸಿ ವಿಚಾರಣೆ ಮಾಡಿದರು. ಎಸ್‌ಪಿ ಮೇಡಂ ಅವರಂತೂ ಸಿಕ್ಕಾಬಟ್ಟೆ ಉಗಿದು ಕಳಿಸಿದರು. ಕಂಪ್ಲೇಂಟು ಸಿಎಂ ತನಕ ಹೋಗಿತ್ತು. ದೊಡ್ಡವರೊಬ್ಬರಿಗೆ ದುಡ್ಡು ಕೊಟ್ಟು ಬಚಾವಾದೆ. ಈಗ ಕಾಲ ಸರಿ ಇಲ್ಲ, ಸ್ಕ್ರಿಪ್ಟ್ ತಂದರೆ ಪರ್ಮಿಷನ್ ಕೊಡ್ತೀನಿ...' ಅನ್ನುತ್ತ ಫೈಲು ಪಕ್ಕಕ್ಕಿಟ್ಟರು.

'ಸಾರ್, ಶನಿಮಹಾತ್ಮೆ ನಾಟಕ. ಅದರಲ್ಲಿ ಅಂಥ ಮಾತುಗಳೇನೂ ಇರಲ್ಲ' ಅಂತ ಸೀನ ಅಂಗಲಾಚಿದ. ಸ್ವಾಮಿಯ ನಾಟಕಕ್ಕೆ ನನ್ನ ಸೇವೆ ಅನ್ನುತ್ತ ಸಿಐ ಜೇಬಿನಿಂದ ಐನೂರು ರುಪಾಯಿ ನೋಟು ತೆಗೆದು ಕೊಡಲು ಮುಂದಾದರು. ಆಮೇಲೆ ನೋಟನ್ನು ಜೇಬಿನೊಳಗೇ ಇಟ್ಟುಕೊಳ್ಳುತ್ತ ಇದು ಕಾನೂನಿಗೆ ಸಂಬಂಧಿಸಿದ ವಿಷಯ ಅಂದರು. ಸೀನ ಚೇಂಬರಿನಿಂದ ಹೊರಬಂದ.

ಐದು ನಿಮಿಷ ಕಳೆದ ಮೇಲೆ ರೈಟರು ಚೇಂಬರಿನಿಂದ ಬರುತ್ತ ಸಿಐ ಸಾಹೇಬರಿಗೆ ಹತ್ತು, ನಂಗೆ ಮೂರು ಕೊಟ್ಟು ಲೆಟರ್ ತಗಂಡು ಹೋಗಿ, ಸೈನಾಗಿದೆ ಅಂದ. ನಾಟಕದಲ್ಲಿ ಆಕ್ಷೇಪಾರ್ಹವಾದದ್ದೇನೂ ಇಲ್ಲ ಅಂತ ಮುಚ್ಚಳಿಕೆ ಬರೆದುಕೊಡಬೇಕು ಅಂದ. ಅಷ್ಟರಲ್ಲಿ ಬಾಬಣ್ಣನ ಫೋನು ಬಂತು. ಚಂದ್ರನ ಹತ್ರ ದುಡ್ಡಿದೆ, ಅದೇನು ಕೊಡಬೇಕೊ ಕೊಟ್ಟು ಪರ್ಮಿಷನ್ ಲೆಟರ್ ತಗಂಡು ಬಾ. ಮೊದಲು ಅದರ ಫೋಟೊ ತೆಗೆದು ವಾಟ್ಸಾಪ್ ಮಾಡು ಅಂತ ಹೇಳಿದ. ಪರ್ಮಿಷನ್ ಲೆಟರು ಸೀನನ ಕೈಗೆ ಸಿಗೋ ಹೊತ್ತಿಗೆ ಹತ್ತು ಗಂಟೆ ಆಗಿತ್ತು.

***

ಸ್ಟೇಜಿನ ಮುಂದೆ ಹತ್ತನ್ನೆರಡು ಸಾವಿರ ಜನ ಸೇರಿದ್ದರು. ಹೋಬಳಿಯ ಎಲ್ಲಾ ಊರುಗಳಿಂದ ಬಂದಿದ್ದ ಜನ ಕಾಯುತ್ತಿದ್ದರು. ಸ್ಟೇಜಿನ ಮುಂದೆ ಒಂದು ಲೈಟು ಬಿಟ್ಟರೆ ಮತ್ತೇನಿಲ್ಲ. ಕೆಲವೇ ಕ್ಷಣಗಳಲ್ಲಿ